**ಬಾಗಲಕೋಟ** : ಬಾಗಲಕೋಟ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ದಿನಾಂಕ 29.05.2018ರಂದು ಡಿ.ಸಿ.ಸಿ. ಬ್ಯಾಂಕ್, ನವನಗರ, ಬಾಗಲಕೋಟ ಇಲ್ಲಿ ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ಹಾಗೂ ಚುನಾವಣಾ ವಿಷಯದ ಕುರಿತು ತರಬೇತಿಯನ್ನು ಆಯೋಜಿಸಲಾಗಿತ್ತು. ಅಧ್ಯಕ್ಷತೆಯನ್ನು ಶ್ರೀ ಜಿ.ಎನ್.ಪಾಟೀಲ್, ನಿರ್ದೇಶಕರು ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ವಹಿಸಿದ್ದರು. ಉದ್ಘಾಟನೆಯನ್ನು ಶ್ರೀ ಹೆಚ್. ಎಲ್.ಹುದಲೂರು. ಸಹಕಾರಿಗಳ ಸಹಾಯಕ ನಿಬಂಧಕರು, ವಿಜಯಪುರ ಇವರು ನೆರವೇರಿಸಿದರು. ಮುಖ್ಯ ಅಥಿತಿಗಳಾಗಿ ಎಸ್.ಎಸ್. ಮಿರ್ಜೆ, ಪ್ರಧಾನ ವ್ಯವಸ್ಥಾಪಕರು, ಬಿ.ಡಿ.ಸಿ.ಸಿ. ಬ್ಯಾಂಕ್, ಬಾಗಲಕೋಟ ಇವರು ಆಗಮಿಸಿದ್ದರು. 105 ಸೌಹಾರ್ದ ಸಹಕಾರಿಗಳಿಂದ 150 ಪ್ರತಿನಿಧಿಗಳು ಭಾಗವಹಿಸಿದ್ದರು.

